ISSN : 3048-7137

# ಆರಯ್

**ಕನ್ನಡ ಇಮ್ಮುಖ ಕುರುಡೋದು (Double Blind)**
**ಮತ್ತು ದಟ್ಟೋದು (Peer Review)**
**ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ**

ಸಂಪುಟ–೨ ಸಂಚಿಕೆ–೨

ಏಪ್ರಿಲ್-ಜೂನ್ ೨೦೨೫

Kannada Online Double Blind Peer-Review Quarterly Research Journal

Volume-2, Number-2 April-June 2025

ಕಟ್ಟುಗ
**ಬಸವರಾಜ ಕೋಡಗುಂಟಿ**

ಬಂಡಾರ ಪ್ರಕಾಶನ
ಮಸ್ಕಿ

**ಆರಯ್**

ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨, ಸಂಚಿಕೆ–೨, ಏಪ್ರಿಲ್–ಜೂನ್ ೨೦೨೫

ISSN : 3048-7137

**ARAY**

Kannada Online Double Blind Peer-Review Quarterly Research Journal
Volume-2, Number-2, April-June 2025
https://aray.in/

ಪುಟ/Pages : 134

ಹಕ್ಕು/@: ಪ್ರಕಾಶಕರು

ಬೆಲೆ/Price : **ರೂ. 50/–**

ಸಂಪಾದಕ
**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ
**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ
**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**
**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ
**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**
**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ
**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**
**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು

**ಪರಶುರಾಮ ಕೋಡಗುಂಟಿ**
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೮೮೬೪ ೦೭೦೧೧
bandaraprakashana@gmail.com
https://bandaraprakashana.com

# ಪ ರಿ ವಿ ಡಿ


| | |
|---|---|
| ಕಾಲದಲ್ಲಿ ಕಲೆಯ ಬಯಲಿನ ತೆಲುಗು ಬಯಲಾಟ<br>**ಸ.ರಘುನಾಥ** | **4-13** |
| ಜನಪದ ರಂಗಭೂಮಿಯಲ್ಲಿ ಪುರಾಣ ಕಥಾನಕಗಳು: ಮರುಚಿಂತನೆ<br>**ಡಿ.ಎಸ್.ಚೌಗಲೆ** | **14-22** |
| ಬಯಲಾಟಗಳಲ್ಲಿ ಮಹಿಳೆಯರು<br>**ಅನಸೂಯ ಕಾಂಬಳೆ** | **23-37** |
| ಗಡಿನಾಡ ಬಯಲಾಟಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆ<br>**ಅರುಣ್ ಕುಮಾರ್ ಎಂ ಬಿ** | **38-48** |
| ಮಧ್ಯ ಕರ್ನಾಟಕ ಭಾಗದ ಬಯಲಾಟದ ಸ್ವರೂಪ ಮತ್ತು ಬಯಲಾಟದ ನೆಲೆಗಳು<br>**ಚಿಕ್ಕಣ್ಣ ಯಣ್ಣೆಕಟ್ಟೆ** | **49-87** |
| ಚಕ್ರಬಿಂಬ ಕೋಟೆ: ಒಂದು ಪಾಠ್ಯಿಕ ವಿಶ್ಲೇಷಣೆ<br>**ಡಾ. ಮುನಿರಾಜ ಎ.** | **88-98** |
| ನನ್ನೂರಿನ ನಾಟಕರಂಗ<br>**ಹುಚ್ಚೇಗೌಡ ಎಚ್.** | **99-113** |
| ಆನೇಕಲ್ ತಾಲ್ಲೂಕಿನ ಕೇಳಿಕೆಗಳು<br>**ಕೆ. ಮುನಿಯಪ್ಪ** | **114-121** |
| ಹೆಣ್ಣನ್ನು ಕಟಕಟೆಯಲ್ಲಿ ನಿಲ್ಲಿಸುವ ಚಿತ್ರಪಟ ರಾಮಾಯಣ<br>**ಶ್ವೇತ ಜೆ.** | **122-130** |

Aray, Vol - 2, No.2

# ನಮ್ಮೂರಿನ ನಾಟಕರಂಗ

ಹುಚ್ಚೇಗೌಡ ಎಚ್.

**ಸೂಚಕ ಪದಗಳು**

ತುಯಲಾಟ, ನಾಟಕರಂಗ, ಗ್ರಾಮೀಣ ನಾಟಕ, ಪ್ರಾದೇಶಿಕತೆ

**ಸಾರಲೇಖ**

ಈ ಪ್ರಬಂಧದಲ್ಲಿ ನಮ್ಮೂರಿನ ಗ್ರಾಮೀಣ ನಾಟಕರಂಗದ ವೈವಿಧ್ಯಮಯ ದೃಶ್ಯಗಳನ್ನು ವಿಶ್ಲೇಷಿಸಲಾಗಿದೆ. ಪ್ರಾಥಮಿಕವಾಗಿ ಮಕ್ಕಳ ನಾಟಕದ ಆಟದಿಂದ ಆರಂಭವಾಗುವ ಉತ್ಸಾಹ, ಸ್ಟೇಜ್ ಸಿದ್ಧತೆ, ಪಾತ್ರಧಾರಿಗಳ ವೈಯಕ್ತಿಕ ಅನುಭವಗಳು ಮತ್ತು ಹಾಸ್ಯ–ವೈಚಾರಿಕ ಸಂಭಾಷಣೆಗಳ ಮೂಲಕ ಹುಟ್ಟುವ ನೃತ್ಯಾನುಭವವನ್ನು ವಿವರಿಸಲಾಗಿದೆ. ಅಂತರಂಗದ ದೃಷ್ಟಿಕೋಣದಿಂದ 'ದೊಡ್ಡ'ವರು ಎದುರಿಸುವ ಸವಾಲುಗಳು, ಪಾತ್ರ ಹಂಚಿಕೆ, ಮೇಷ್ಟ್ರಿ–ನಿರ್ದೇಶನ ಹಾಗೂ ತಳಮಟ್ಟದ ಕಲಾವಿದರ ಶ್ರಮ ಮತ್ತು ತ್ಯಾಗಗಳನ್ನು ಹತ್ತಿರದಿಂದ ಪರಿಗಣಿಸಲಾಗಿದೆ. ಹಳ್ಳಿ ನಾಟಕದಲ್ಲಿ ಜಾತಿ, ಲಿಂಗ, ಸಾಮಾಜಿಕ ಸ್ಥಾನಮಾನ ಮತ್ತು ಸಾಂಸ್ಕೃತಿಕ ನಂಬಿಕೆಗಳ ಪ್ರಭಾವ, 'ಸೂಳೆ' ಅಥವಾ ಮಹಿಳಾ ಕಲಾವಿದರ ಸ್ಥಾನ, ಮತ್ತು ಜನಪ್ರಿಯತೆ–ಅಸಹನೆಗಳ ಪಾತ್ರವನ್ನು ವಿಶ್ಲೇಷಿಸಲಾಗಿದೆ. ಗ್ರಾಮೀಣ ನಾಟಕವು ಕಲೆಯ ಸಾಂಪ್ರದಾಯಿಕ ಅಸ್ತಿತ್ವವನ್ನು ಉಳಿಸಿಕೊಂಡು, ಸಮಾಜದ ನೈತಿಕ, ವೈಚಾರಿಕ ಹಾಗೂ ಉತ್ಸವಾತ್ಮಕ ಜೀವನಕ್ಕೆ ಸಾಂಸ್ಕೃತಿಕ ಬಲ ನೀಡುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಹಳ್ಳಿ ಬಿಟ್ಟು ಪಟ್ಟಣ ಸೇರುವ ಬಹುತೇಕ ಅಕ್ಷರಸ್ಥರು ತಮ್ಮ ಊರನ್ನು ಪರಿಚಯಿಸುವುದು ಕುಗ್ರಾಮವೆಂದೇ. ನನ್ನೂರು ಜನಸಂಖ್ಯೆ ಮತ್ತು ವಿಸ್ತೀರ್ಣದಲ್ಲಿ ದೊಡ್ಡದೇ. ಆದರೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮಾತ್ರ ನಿಜಕ್ಕೂ 'ಕುಗ್ರಾಮ'ವೇ. ಸಾಂಸ್ಕೃತಿಕವಾಗಿ(ಆಚರಣೆ, ನಂಬಿಕೆ, ಕಲೆ ಎಂಬರ್ಥದಲ್ಲಿ) ಊರಿನಲ್ಲಿ ನಡೆಯುವ ಜಾತ್ರೆ, ಉತ್ಸವ, ಹಬ್ಬ ಹರಿದಿನ ಇತ್ಯಾದಿಗಳಲ್ಲಿ ಶ್ರೀಮಂತವಾದುದೇ ಹೌದು. ಹಾಗೆಂದಾಕ್ಷಣ ಜಾತಿ, ಲಿಂಗ ಇತ್ಯಾದಿ ಅಸಮಾನತೆಗಳು ಅಳಿದ ಸಮಾನತಾ ಸಮಾಜವೇನಲ್ಲ. ಬಹುಶಃ ಇವುಗಳ ಬಗೆಗೆ ಎಚ್ಚರದ ಪ್ರಜ್ಞೆ ಇಲ್ಲದಿರುವ ಕಾರಣದಿಂದಲೇ ಊರಿನಲ್ಲಿ 'ಸಾಮರಸ್ಯ' ತುಂಬಿದಂತೆ ಕಾಣುತ್ತಿದೆ. ಇಂತಹ ಊರಿನಲ್ಲಿ ನಾಟಕ ಆಡಿದ, ಆಡುವ ಅನುಭವ ಏನೆಲ್ಲ ಚಿತ್ರ ವಿಚಿತ್ರಗಳನ್ನು ಒಳಗೊಂಡಿರ ಬಹುದು ಎಂಬ ಕುತೂಹಲ ಸಹಜ. ಇಲ್ಲಿ ಕೆಲವು ಉಪಶೀರ್ಷಿಕೆಗಳ ಅಡಿಯಲ್ಲಿ ನನ್ನೂರಿನ ನಾಟಕರಂಗದ ಸ್ಥಿತಿಗತಿಯನ್ನು ಈ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

## ೧. ಮಕ್ಕಳ 'ಆಟ'

ನನ್ನೂರಿನಲ್ಲಿ ನಾಟಕ ಎಂದಾಕ್ಷಣ ಬೇರೆ ಬೇರೆ ವಯಸ್ಸಿನವರಿಗೆ ಬೇರೆ ಬೇರೆಯದೇ ಸಂಭ್ರಮ. ಮಕ್ಕಳಿಗೆ ಅದು ನಿಜಕ್ಕೂ ಒಂದು 'ಆಟ'ವೇ ಸರಿ. ನಾಟಕ ನಡೆಯುವ ಒಂದು ವಾರ ಮುನ್ನವೇ ಗೆಜ್ಜೆಪೂಜೆ ನಡೆಯುವುದರಿಂದ ನಾಟಕ ಸ್ಟೇಜಿನ ಸ್ಥಳ ನಿರ್ಧಾರಿತವಾಗಿರುತ್ತದೆ. ಇದನ್ನು ಬಲ್ಲ ಮಕ್ಕಳು ನಾಟಕ ಆಡುವ ದಿನ ಸೀನ್ಸ್ ಬರುವುದನ್ನೇ ಕಾಯುತ್ತವೆ. ಇಲ್ಲಿ ಸೀನ್ಸ್ ಎಂದರೆ ನಾಟಕ ಆಡಲು ಬೇಕಾಗುವ ಎಲ್ಲಾ ರಂಗಪರಿಕರ, ವೇಷಭೂಷಣ, ಮೇಕಪ್ ಇತ್ಯಾದಿ ಸಕಲ ಸೌಲಭ್ಯಗಳನ್ನು ಹೊತ್ತು ತರುವ ಒಂದು ಆಕರ್ಷಕ ಲಾರಿ! ಮಕ್ಕಳು ಆ ಲಾರಿ ಸುತ್ತಾ ಸುತ್ತುವರಿದು ಸಂಭ್ರಮ ಸಡಗರದಲ್ಲಿ ಕುಣಿದು ಕುಪ್ಪಳಿಸುತ್ತಾರೆ. ಸ್ಟೇಜ್ ಮುಂಭಾಗದ ಧೂಳಿನಲ್ಲಿ ಸ್ನಾನ ಮಾಡಿದರೂ ಅವರ ತೃಪ್ತಿ ತೀರದು! ಹೀಗೆ ಸೀನ್ಸ್ ಬರುವುದರೊಂದಿಗೆ ನಾಟಕ ದಿನದ ಸಂಭ್ರಮ ಹೆಚ್ಚಾಗುತ್ತದೆ. ಆದರೆ ಮಕ್ಕಳ ಪಾಲಿಗೆ ಈ ಸಂಭ್ರಮವೇ ಸಾಕಾಗಿ ಹೋಗುತ್ತದೆ. ಕಾರಣ ಸಂಜೆ ಸು. 4 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ಆಟ ಪಾಠ ಜಗಳ ಮನಸ್ತಾಪಗಳಲ್ಲೇ ಸಮಯ ಕಳೆದು ಹೋಗುತ್ತದೆ. ರಾತ್ರಿಯೆಲ್ಲ ನಾವು ನಾಟಕ ನೋಡಿಬಿಡುತ್ತೇವೆ ಎಂಬ ಹುಮ್ಮಸ್ಸಿನಲ್ಲೇ ಸ್ಟೇಜಿನ ಮುಂಭಾಗದ ಸೀಟುಗಳಿಗೆ ನಾನಾ ರೀತಿಯಲ್ಲಿ ಕಿತ್ತಾಡಿ ಸೀಟನ್ನ ಭದ್ರವಾಗಿ ಹಿಡಿದಿರುತ್ತಾರೆ. ಸಾಲದ್ದಕ್ಕೆ ನಾಟಕದ ವಾದ್ಯವೃಂದದವರು ಸು. ಒಂದು ಗಂಟೆಗಳ ಮೊದಲೇ ಪಕ್ಕವಾದ್ಯ ರೆಡಿ ಮಾಡುವ ಕೆಲಸ ಆರಂಭಿಸಿರುತ್ತಾರೆ. ಆ ನಾದ ಇನ್ನೇನು ಕೆಲವೇ ಕ್ಷಣಗಳಲ್ಲಿ ನಾಟಕ ಆರಂಭವಾಗುತ್ತದೆ ಎಂಬ ಭ್ರಮೆಯನ್ನು ಮಕ್ಕಳಲ್ಲಿ ಅಷ್ಟೇ ಯಾಕೆ ದೊಡ್ಡವರಲ್ಲೂ

ಮೂಡಿಸಿಬಿಡುತ್ತದೆ. ಇದನ್ನು ಮನೆ ಮನೆಯಲ್ಲಿದ್ದ ನಾಟಕದ ಪ್ರೇಕ್ಷಕರನ್ನು ಸ್ಟೇಜಿನ ಕಡೆ ಕರೆತರುವ ಅಲಾರಾಂ ಎಂದರೂ ತಪ್ಪಾಗದು.

ಸರಿ, ಇಷ್ಟು ಕಾಯ್ದು ತಡವರಿಸಿ ನಾಟಕ ನೋಡಲು ಕನವರಿಸಿದ ಮಕ್ಕಳು ನಾಟಕ ಆರಂಭಕ್ಕೂ ಮುನ್ನವೇ ಅಥವಾ ಸೂತ್ರದಾರನ ಹಾಡು, ನೃತ್ಯ ಒಂದೆರಡು ಮಾತುಗಳ ಸೀನು ಮುಗಿವಷ್ಟರಲ್ಲಿ ಗಾಢನಿದ್ರೆಗೆ ಜಾರಿ ಬಿಡುತ್ತವೆ. ಕೆಲವು ಕಿತಾಪತಿ ಮಕ್ಕಳು ಹೀಗೆ ಮಲಗಿದ ತಮ್ಮ 'ಮಿತ್ರ'ರನ್ನು ನಾನಾ ರೀತಿಯಲ್ಲಿ ಪೀಡಿಸುತ್ತಾ ತಮ್ಮ ನಿದ್ರೆಯ ಕಣ್ಣನ್ನು ಎಚ್ಚರವಾಗಿಡುವ ಉಪಾಯವನ್ನೂ ಕಂಡುಕೊಂಡಿರುತ್ತಾರೆ. ಮುಂದಿನ ಸಾಲಿನಲ್ಲಿ ಕುಳಿತ ಮಕ್ಕಳ ಜುಟ್ಟು ಸ್ವಲ್ಪ ಉದ್ದ ಇದ್ದಲ್ಲಿ ಅವರ ಪಾಡು ಹೇಳತೀರದು. ಹಿಂದಿನಿಂದ ವಿರುದ್ಧ ದಿಕ್ಕಿಗೆ ಕೈ ನೀಡಿ ಥಟ್ಟಂತ ಕೈ ತೆಗೆದು ಭಾರಿ ಸಂಯಮವನ್ನು ನಟಿಸುತ್ತಾ ಗಂಭೀರವಾಗಿ ಕುಳಿತುಬಿಡುತ್ತಾರೆ. ಜೊಟ್ಟು ಚುಳ್ಳೆಂದು ನೋವಾದವರು ಹಿಂದೆ ತಿರುಗಿ ನೋಡಿದರೆ ಇವರು ನಿಜವಾದ 'ನಟನೆ'ಯನ್ನು ತೋರಿಸಿಬಿಡುತ್ತಾರೆ. ನೋವುಂಡವರು ಅನುಮಾನಿಸಿ ಇವರೆಡೆ ಕೊಂಚ ಕಣ್ಣು ಹಾಕಿದರೂ ಸಾಕು ಅಲ್ಲಿಗೆ ಜಗಳ ಆರಂಭ. ಈ ಸೂಚನೆ ಬಲ್ಲ ಮುಂದಿನ ಸಾಲಿನ 'ಮುಗ್ಧ' ಮಕ್ಕಳು ಸೈಲೆಂಟಾಗಿ ಕುಳಿತುಕೊಳ್ಳಬೇಕಾದ ಅನಿವಾರ್ಯತೆಯೂ ಉಂಟು. ಜೊತೆಗೆ ಮುಂದಿನ ಸಾಲು ಅಥವಾ ಅಕ್ಕಪಕ್ಕದಲ್ಲಿ ಮಕ್ಕಳು ಮಲಗಿದ್ದರಂತೂ ಇವರಿಗೆ ಮಾರಿ ಹಬ್ಬ! ಮಲಗಿರುವವರ ಕಣ್ಣು ಹೇಗೆ ಕಾಣಬಹುದು ಎಂಬ ಕುತೂಹಲದಲ್ಲಿ ಕಣ್ಣರೆಪ್ಪೆಯನ್ನು ಅಗಲಿಸಿ ನೋಡುತ್ತಾ ಪಕ್ಕದಲ್ಲಿ ಇರುವವರೊಡನೆ ಹಾಸ್ಯ ಮಾಡುತ್ತಾ ಮಂದಹಾಸ ಬೀರುತ್ತಾರೆ. ನಾಟಕ ನೋಡುವಾಗಮಲಗುವವರ ಕೈಕಾಲುಗಳು ಯಾವ ದಿಕ್ಕಿಗೆ ಇರಬೇಕೆಂಬ ಯಾವ ನಿಯಮವೂ ಇಲ್ಲದಿರುವುದರಿಂದ ತಮ್ಮ ಕಡೆಗೆ ಕಾಲುಚಾಚಿ ಮಲಗಿರುವವರ ಕಾಲಿನ ಹೆಬ್ಬೆರಳುಗಳು ಸಿಕ್ಕರೆ ಪರಮ ಸಂತೋಷ! ಕಾರಣ ಈಗಾಗಲೇ ಯಾವುದಕ್ಕೂ ಇರಲಿ ಎಂದು ಜೊತೆಯಲ್ಲಿ ತಂದಿರುವ ಸುತ್ತಲಿದಾರದಿಂದ ಅದೂ ಇಲ್ಲವಾದಲ್ಲಿ ತಮ್ಮ ನಡುವಿನಲ್ಲಿರುವ ಉಡುದಾರವನ್ನೇ ಬಿಚ್ಚಿ ಕಾಲಿನ ಹೆಬ್ಬೆರಳುಗಳನ್ನು ಕಟ್ಟಿ ಸುಮ್ಮನಿದ್ದು ಬಿಡುವ ತ್ಯಾಗಿಗಳೂ ಇದ್ದಾರೆ! ಆಗಲೂ ಕಾಲು ಕಟ್ಟಿಸಿಕೊಂಡವರು ಎಚ್ಚರಗೊಳ್ಳದಿದ್ದಲ್ಲಿ ಅವರಿಗೆ ಸೊಳ್ಳೆಗಿಂತ ಭಾರಿ ಪ್ರಮಾಣದಲ್ಲಿ ಜೋರಾಗಿ ಗಿಂಚಿ ಎಚ್ಚರಿಸುವ ಸೌಜನ್ಯವೂ ಉಂಟು! ಎಚ್ಚರಗೊಂಡು ಕಾಲು ಎಳೆದು ನೋಡಿದರೆ ಆಕ್ಸಿಡೆಂಟಲ್ಲಿ ಕಾಲು ಕಳೆದುಕೊಂಡವರ ಸ್ಥಿತಿ ಅನುಭವಿಸಿದರೆ ಆಶ್ಚರ್ಯವಿಲ್ಲ! ಅವರು ಭಯಗೊಂಡಷ್ಟೂ ಖುಷಿಪಡುವ ಮನಸ್ಸು ಇವರದ್ದಾಗಿರುತ್ತದೆ. ಹೀಗೆ ನಿದ್ರೆಯನ್ನು ದೂಡಲು ನಾನಾ ತಂತ್ರ-ಕುತಂತ್ರಗಳನ್ನು ಹೆಣೆಯುತ್ತ ಹೇಗೋ ಸಮಯವನ್ನು ನೂಕುತ್ತಾರೆ. ನಿಮಗೆ ಆಶ್ಚರ್ಯವೆನಿಸಬಹುದು. ಇಷ್ಟೆಲ್ಲಾ ಕಷ್ಟ ಪಡಬೇಕೇ? ಸುಮ್ಮನೆ ಎದ್ದು ಮನೆ ಕಡೆ ಹೋದರೆ ಆಗದೆ ಎಂದು. ಮನೆ

ಕಡೆ ಹೋಗಲು ಇವರೇನೋ ತಯಾರಿರುತ್ತಾರೆ, ಆದರೆ ಅವರು ಬಿಡಬೇಕಲ್ಲ! ಯಾರವರು ಎಂದಿರಾ? ಅವರೇ ಅಥವಾ ಅದೇ ಊರಿನ ಸಂದಿಗೊಂದಿಗಳಲ್ಲಿ ರಾತ್ರಿಹೊತ್ತು ಕಾವಲು ಕಾಯುವ ನಿಷ್ಠಾವಂತ ಸೈನಿಕರು! ಅರ್ಥಾತ್ ದೆವ್ವಗಳು! ಹೀಗೆ ನಾಟಕ ಮಕ್ಕಳ ಪಾಲಿಗೆ ಹಲವಾರು ರಸಗುಳಿಗೆಗಳ ಪಾಕದ ಜೊತೆ ಭಿನ್ನ ಭಾವನೆ ಗಳನ್ನೂ ಕೆಲವು ಸಂಕಟಗಳನ್ನೂ ತರುವಲ್ಲಿ ಯಾವ ಸಂಶಯವೂ ಇಲ್ಲ. ಜೊತೆಗೆ ಮೊದಲು ಮಲಗಿದ್ದವರು ಎಚ್ಚರಗೊಂಡು ಬೇರೆ ಬೇರೆಯವರಿಗೆ ಮರಳಿ ಇದೇ ಕ್ರಿಯೆಗಳನ್ನು ಮಾಡುತ್ತಾ ತಮ್ಮ ಪಾತ್ರವನ್ನು ಕೂಡ ಅತ್ಯುತ್ತಮವಾಗಿ ನಿರ್ವಹಿಸುವ 'ನಟ'ರೆ ಆಗಿರುತ್ತಾರೆ ಎಂಬುದು ಚೋದ್ಯವೇ ಸರಿ. ಆಗ ಬಲಿಪಶುಗಳು ಮೊದಲ 'ಶೋಷಕ'ರೇ ಆಗಿರುತ್ತಾರೆ ಎಂಬುದು ಮತ್ತೂ ವಿಸ್ಮಯ. ದೊಡ್ಡವರ ನಾಟಕದ ಮುಂದೆ ಮಕ್ಕಳ ನಿಜ ಜೀವನದ ಈ 'ಆಟ' ಎಂದು ಕೂಡ ಬತ್ತಲಾರದ ಗಂಗೆ .

ಇಷ್ಟು ಮಾತ್ರವಲ್ಲ, ಅವರಲ್ಲಿ ನಾಟಕದ ಬಗೆಗೆ ಉತ್ಸಾಹ ಆರಂಭವಾಗುವುದೇ ನಾಟಕದ ಪ್ರಾಕ್ಟೀಸ್ ಆರಂಭದ ಮೂಲಕ. ಹಾರ್ಮೋನಿಯಂ ಮತ್ತು ಹಾಡುಗಾರಿಕೆಯ ನಾದದ ದನಿ ಮಕ್ಕಳನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ. ಈ ವರ್ಷ ನಮ್ಮೂರಿನಲ್ಲಿ ನಾಟಕ ನಡೆಯುತ್ತದೆ, ಇಂತ ಮನೆಯಲ್ಲಿ ಇಷ್ಟು ಗಂಟೆಗೆ ಪ್ರಾಕ್ಟಿಸ್ ಎಂಬ ಮಾಹಿತಿ ಅದು ಹೇಗೋ ಸುಲಭವಾಗಿ ಸಿಕ್ಕಿಬಿಡುತ್ತದೆ! ಪ್ರಾಕ್ಟೀಸ್ ದಿನಗಳಲ್ಲಿ ಪಾತ್ರಧಾರಿಗಳ ಏನೆಲ್ಲಾ ಕುಚೋದ್ಯಗಳು ನಡೆಯುತ್ತವೆ ಎಂಬುದನ್ನು ನೋಡಿ ಅನುಭವಿಸಿದವರೇ ಬಲ್ಲರು. ಹಾಗಾಗಿ ಮಕ್ಕಳ ಪಾಲಿಗೆ ಈ ಪ್ರಾಕ್ಟೀಸ್ ನಿಜಕ್ಕೂ ವಿಸ್ಮಯಕಾರಿ ಅನುಭವವೇ ಸರಿ. ಅಂಗಡಿಗೆ ಹೋಗಿ ಸಕ್ಕರೆ, ಟೀ ಪುಡಿ, ಹಾಲು ಇತ್ಯಾದಿ ತರಲು ಎಷ್ಟೋ ವೇಳೆ ಬೆಂಕಿಕಡ್ಡಿ ತರಲು ಕಳಿಸಿದ ತಾಯಂದಿರು ಮತ್ತೆ ಅವರನ್ನು ಹುಡುಕಿಕೊಂಡು ಬಂದು ತಲೆಗೆ ಎರಡು ತಟ್ಟಿ ಎರಡು ಬೈಗುಳ ಬಿಗಿದು ಕರೆದುಕೊಂಡು ಹೋದ ಉದಾರಣೆಗಳಿಗೇನೂ ಬರವಿಲ್ಲ. ಏನು ಮಾಡೋದು ನಾಟಕದ ಸೆಳೆತ, ಅಂತಹದ್ದು! ಇಲ್ಲಿಗೂ ಮಕ್ಕಳ ನಾಟಕದ ವಿಚಾರ ಮುಗಿಯುವುದಿಲ್ಲ. ಗೆಜ್ಜೆಪೂಜೆ ಮತ್ತು ನಾಟಕ ಆಡಿದ ಅನಂತರ ಆ ಮಕ್ಕಳ ಪಾಲಿಗೆ ಇಷ್ಟವಾದ ಯಾವುದೋ ಹಾಡು, ಡೈಲಾಗ್, ಪಾತ್ರವನ್ನು ತಮ್ಮ ತಮ್ಮಲ್ಲಿ ಗುಂಪುಗೂಡಿಕೊಂಡು ಅನುಕರಣೆ ಮಾಡುತ್ತಾ ತಾವೇ ನಾಟಕ ಆಡುತ್ತಿದ್ದೇವೆ ಎಂಬುದಾಗಿ ನಿಜಕ್ಕೂ ಅಭಿನಯ ಮಾಡುತ್ತಾ ಸಂಭ್ರಮಿಸುವ ಮಕ್ಕಳಾಟ ನೋಡುಗರಿಗೆ ಆಹ್ಲಾದಕಾರಿ. ಆದರೆ ಇಲ್ಲಿ ಪ್ರೇಕ್ಷಕರು ಹೊರಗಡೆಯಿಂದ ಬಂದಲ್ಲಿ ಮಾತ್ರ ಮಕ್ಕಳಿಗದು ಇಷ್ಟವಾಗುವುದಿಲ್ಲ. ಏಕೆಂದರೆ ಇಲ್ಲಿ ಪಾತ್ರಧಾರಿಗಳು, ನಿರ್ದೇಶಕರು, ಸೂತ್ರಧಾರಿ ಕೊನೆಗೆ ಪ್ರೇಕ್ಷಕರು ಎಲ್ಲವೂ ಅವರೇ ಆಗಿರುತ್ತಾರೆ! ಅದೊಂದು ಭಿನ್ನವಾದ ಲೋಕ. ಅವರು ಬಳಸಿಕೊಳ್ಳುವ ರಂಗ ಪರಿಕರಗಳು ಕೂಡ ಮಕ್ಕಳ ಮನಸ್ಸಿನ ಕುತೂಹಲ ಆಸಕ್ತಿಗೆ

ಅನುಗುಣವಾಗಿ ಅವರ ಸೃಜನಶೀಲತೆಯನ್ನು ಎತ್ತಿ ತೋರಿಸುವ ಅಂಶವೇ ಇರುತ್ತದೆ. ಎಳನೀರು ಬುಂಡೆಗೆ ಒಂದು ಕೋಲ್ ಸಿಕ್ಕಿಸಿದರೆ ಗದೆ ರೆಡಿ! ಒಂದು ಕಡ್ಡಿಗೆ ದಾರವನ್ನು ಒಂದು ತುದಿಯಲ್ಲಿ ಕಟ್ಟಿ ಎಳೆದು ಸ್ವಲ್ಪ ಭಾಗಿಸಿ ಕಟ್ಟಿದರೆ ಪಾರ್ಥನ ಅಸ್ತ್ರ ಸಿದ್ಧವಾದಂತಯೇ! ಹಾಗೆಯೇ ಹಾರ್ಮೋನಿಯಂ ಆಗಿ ದೊಡ್ಡದೊಂದು ಇಟ್ಟಿಗೆ, ದೊಡ್ಡ ಕಲ್ಲು ಇತ್ಯಾದಿ ಯಾವುದೇ ವಸ್ತು ಕೂಡ ಜೀವತಳೆದು ಮಿಡಿದು ನಾದವನ್ನು ಹೊಮ್ಮಿಸಬಲ್ಲದು. ಮಕ್ಕಳ ಮನೋಲೋಕವೇ ಅಂತದ್ದು! ಮಕ್ಕಳ ಅನುಭವ ಇಷ್ಟು ಹೇಳಿದರಲ್ಲ, ಹೇಗೆ ಅಂತೀರಾ? ನಾನು ಕೂಡ ಇದೇ ಊರಲ್ಲಿ ಹುಟ್ಟಿ ಬೆಳೆದ ಒಂದು ಮಗುವಲ್ಲವೇ?!

## ೨. 'ದೊಡ್ಡ'ವರ ಮೆರೆದಾಟ

ಇನ್ನು 'ದೊಡ್ಡ'ವರಿಗೆ ಬೇರೆ ಬೇರೆ ರೀತಿಯ ಚಿತ್ರ ವಿಚಿತ್ರ ಅನುಭವಗಳು ಆಗುತ್ತವೆ. ಊರಿನಲ್ಲಿ ನಾಟಕ ಆರಂಭಿಸಲು ನಿಜಕ್ಕೂ ನಾಟಕದ ಬಗ್ಗೆ ತೀವ್ರ ಹಂಬಲ ಇರುವ ಇಬ್ಬರು ಮೂವರಾದರೂ ಬೇಕು. ಹೆಚ್ಚಿನ ಸಂದರ್ಭದಲ್ಲಿ ಅವರೇ ಹಣವನ್ನು ಹೊಂದಿಸಿ ಉಳಿದ ಪಾತ್ರಧಾರಿಗಳನ್ನು ಹೇಗೋ ಒಪ್ಪಿಸಿ ಒಂದು ನಾಟಕ ಕಟ್ಟುವ ಅವರ ನಾಯಕತ್ವ ಗುಣ ಮೆಚ್ಚಲೇಬೇಕು. ಅವರಿಗೆ ನಾಟಕ ಅನ್ನೋದು ಒಂದು ಕಲೆ, ಪ್ರತಿಷ್ಠೆ, ಶೋಕಿ, ಕೀರ್ತಿ, ಗೌರವ ಇತ್ಯಾದಿ ಏನೇನೋ ಆಗಿರುತ್ತದೆ. ಕಲೆಯ ಸ್ಥಾನ ಕೊನೆಯದೇ ಆಗಿದ್ದರೆ ಆಶ್ಚರ್ಯವಿಲ್ಲ.

ಪಾತ್ರಗಳ ಹಂಚಿಕೆಯಲ್ಲೂ ಕೂಡ ಹಣ, ಅಧಿಕಾರ, ಸ್ಥಾನಮಾನ, ವಿದ್ಯಾಭ್ಯಾಸ ಇತ್ಯಾದಿ ಅಂಶಗಳೇ ಪ್ರಮುಖ ಪಾತ್ರವಹಿಸುತ್ತವೆ. ತುಂಬಾ ಹಾಡುಗಳುಳ್ಳ ಪಾತ್ರಗಳಿಗೆ ಸ್ವರ ಕೂಡ ಚೆನ್ನಾಗಿ ಇರಬೇಕಾಗುತ್ತದೆ. ಹೀಗೆ ಕೆಲವು ಅಗತ್ಯ ಲಕ್ಷಣಗಳನ್ನು ಬಿಟ್ಟರೆ ಉಳಿದೆಲ್ಲ ಸಂದರ್ಭದಲ್ಲೂ ಪಾತ್ರಗಳ ಹಂಚಿಕೆ ಹವ್ಯಾಸಿ ರಂಗಭೂಮಿಗಿಂತ ಸಂಪೂರ್ಣಭಿನ್ನವೇ. ಆದರೆ ಸೀಮಿತ ಅವಕಾಶದಲ್ಲಿ ಒಂದಿಬ್ಬರ ಹುಮ್ಮಸ್ಸಿನಲ್ಲಿ ಇಡೀ ಊರಿನಲ್ಲಿ ರಂಗಭೂಮಿಯ ವಾತಾವರಣವನ್ನು ಕಟ್ಟುವ ಅವರ ಶ್ರಮ, ಜಾಣ್ಮೆ, ತಾಳ್ಮೆ, ತ್ಯಾಗ ಮನೋಭಾವಗಳು ಗಮನಾರ್ಹ. ಆದರೆ ಈ ಪಯಣ ಸುಲಭದ್ದೇನೂ ಆಗಿರುವುದಿಲ್ಲ. ನಾನಾ ರೀತಿಯ ಸಂಕಷ್ಟ, ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಅನಕ್ಷರಸ್ಥರೇ ಹೆಚ್ಚು ಇರುವುದರಿಂದ ಅವರ ಡೈಲಾಗ್ ಡೆಲಿವರಿಯ ರೀತಿ, ಪ್ರಾಕ್ಟೀಸ್ ಸಮಯದಲ್ಲಿ ಅಷ್ಟೇ ಏಕೆ ಕೆಲವು ಸಂದರ್ಭದಲ್ಲಿ ನಾಟಕದ ದಿನವೇ ಆಡಿ ಹಾಸ್ಯಾಸ್ಪದವಾಗಿ ನೋಡುಗರಿಗೆ ಹಾಸ್ಯರಸದೌತಣವನ್ನು ಉಚಿತವಾಗಿ ನೀಡುವ ದಾನಿಗಳೂ ಆಗಿಬಿಡುತ್ತಾರೆ. ಇಂಥ ಅವಕಾಶಗಳನ್ನು ನಮ್ಮ ಪ್ರೇಕ್ಷಕರು ಸುಮ್ಮನೆ

ISSN : 3048-7137

ಬಿಡುತ್ತಾರೆಯೇ?ನಾಟಕದ ಪಾತ್ರಧಾರಿಗಳ ಅಭಿನಯದ, ಮಾತಿನ ಹಾಸ್ಯಕಿಂತ ಮಧ್ಯೆ ಮಧ್ಯೆ ಪ್ರೇಕ್ಷಕರೇ ಆಡುವ ಮಾತುಗಳನ್ನು ಮರೆಯಲಾಗುವುದಿಲ್ಲ. ಇದಕ್ಕೆ ಒಂದು ಪ್ರಸಂಗ.

ಊರಿನಲ್ಲಿ ದಕ್ಷಯಜ್ಞ ನಾಟಕ ಆಡುತ್ತಿದ್ದರು. ಅದರಲ್ಲಿ ಭೃಗು ಪಾತ್ರಧಾರಿ ತನ್ನ ಪಾತ್ರದ ಮುಖ್ಯವಾದ ಡೈಲಾಗ್ ಒಂದನ್ನು ಹೀಗೆ ಹೇಳಿದ:"ಆ ಪರ ಶಿವನಿಗೆ ಹಣೆಯಲ್ಲಿ ಕಣ್ಣುಂಟು, ಈ ಭೃಗುದೇವನಿಗೆ ಕಾಲಲ್ಲಿ ಕಣ್ಣುಂಟು". ಇದೇ ಸಮಯಕ್ಕೆ ಕಾದು ಕುಳಿತಿದ್ದನೋ ಎನ್ನುವಂತೆ ಪ್ರೇಕ್ಷಕರ ಕಡೆಯಿಂದ ಒಬ್ಬಾತ ಥಟ್ಟನೆ "ನಿಮ್ಮಪ್ಪನಿಗೆ ಮನೆಯಲ್ಲಿ ಧಮ್ಮುಂಟು" ಎಂದುಬಿಟ್ಟನಂತೆ! ಪ್ರೇಕ್ಷಕರಿಗೆ ರಸ ಕವಳ ಸಿಕ್ಕಿದಂತಾಯಿತು! ಎಲ್ಲರೂ ನಗೆಗಡಲಲ್ಲಿ ತೇಲಿ ಹೋದರು. ಭೃಗು ಪಾತ್ರಧಾರಿ ಮತ್ತೆ ರಂಗಕ್ಕೆ ಬರಲು ನಾಚಿಕೆ ಪಟ್ಟುಕೊಂಡು ಸುಮಾರು ಹೊತ್ತು ಹಿಂಜರಿಯುವಂತೆ ಆಯಿತು. ಇದೊಂದು ವಿಶಿಷ್ಟ ಅನುಭವವೇ ಸರಿ. ನಮ್ಮೂರಿನಲ್ಲಿ ನಾಟಕ ಸಂದರ್ಭ ಬಂದಾಗ ಈಗಲೂ ಇದನ್ನು ನೆನಪು ಮಾಡಿಕೊಳ್ಳುತ್ತಾರೆ. ಇನ್ನೊಂದು ಸಂದರ್ಭ, ಇದನ್ನು ಹೆಚ್ಚು ಜನರು ಮಾತನಾಡಿಕೊಳ್ಳುವುದಿಲ್ಲ. ಆದರೆ ತುಂಬಾ ಜನರಿಗೆ ಗೊತ್ತು. ಇದು ನಾನೇ ಪ್ರತ್ಯಕ್ಷ ಕಂಡ ಅನುಭವ ಕೂಡ.

ಒಮ್ಮೆ ಕುರುಕ್ಷೇತ್ರ ನಾಟಕ ನಡೆಯುತ್ತಿತ್ತು. ನಾಟಕವನ್ನು ವಿಡಿಯೋದಲ್ಲಿ ಸೆರೆಹಿಡಿದು ತಮ್ಮ ಕಲೆಯ ನೆನಪನ್ನು ಶಾಶ್ವತಗೊಳಿಸಿಕೊಳ್ಳಬೇಕು ಎಂಬ ಹುಮ್ಮಸಿನಲ್ಲಿ ನಾಟಕ ತಂಡದವರಿದ್ದರು. ಹಾಗಾಗಿ ಪಾತ್ರಧಾರಿಗಳು ಪ್ರಥಮ ಬಾರಿಗೆ ಎಂಟ್ರಿ ಕೊಟ್ಟಾಗ ಅವರ ಸಂಬಂಧಿಕರು, ಹಿತೈಷಿಗಳು ಹಾರ ತುರಾಯಿ ಹಾಕುವ, ನೋಟನ್ನು ಅವರ ಬಟ್ಟೆಗೆ ಪಿನ್ ಮೂಲಕ ಹಾಕುವ ಯಾವುದೇ ಕೆಲಸವನ್ನು ಯಾರೂ ಮಾಡಬಾರದು ಎಂಬುದಾಗಿ ನಾನಾ ರೀತಿಯಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು. ಆದರೆ ದುರ್ಯೋಧನ ಪಾತ್ರಧಾರಿ ಸ್ವಲ್ಪ ಹುಮ್ಮಸಿನಲ್ಲಿ (ಅವರು ತುಂಬಾ ಒಳ್ಳೆಯ ಕಲಾವಿದರು ಕೂಡ) ಪಾತ್ರ ಪ್ರವೇಶ ಮಾಡಿದಾಗ ಅವರ ಸಂಬಂಧಿಕರೊಬ್ಬರು ಪ್ರೀತಿಯಿಂದ ದೊಡ್ಡದೊಂದು ಹೂವಿನ ಹಾರವನ್ನು ತಂದು ಹಾಕಿಬಿಟ್ಟರು! ಇದನ್ನು ನೋಡಿದ ಊರಿನ ಮುಖಂಡರೊಬ್ಬರು ಎಷ್ಟು ಸಿಟ್ಟುಗೊಂಡರೆಂದರೆ ಸಾವಿರಾರು ಪ್ರೇಕ್ಷಕರ ಎದುರಿನಲ್ಲೇ ನೇರವಾಗಿ ರಂಗಸ್ಥಳಕ್ಕೆ ನುಗ್ಗಿ ಹಾಕಿದ್ದ ಹೂವಿನ ಹಾರವನ್ನು ಕಿತ್ತೆಸೆದು ತಮ್ಮ ಶಿಸ್ತು/ಕೋಪವನ್ನು ದಾಖಲು ಮಾಡಿಬಿಟ್ಟರು! ಇದೇನೋ ನಡೆದು ಹೋಯಿತು ಎಂದು ಸುಮ್ಮನಾಗಿ ಬಿಡುವ ಘಟನೆ ಅಲ್ಲ! ಕಾರಣ ವಿಡಿಯೋದಲ್ಲಿ ಚನ್ನಾಗಿ ಸೆರೆಯಾಗಿ ಬಿಟ್ಟಿದೆ! ಸ್ವತಃ ಪಾತ್ರಧಾರಿ ಈ ಸೀನನ್ನು ವಿಡಿಯೋದಲ್ಲಿ ನೋಡುತ್ತಾ ಮೈಪರಚಿಕೊಂಡ ಸಂದರ್ಭವನ್ನು ನಾನೇ ಕಣ್ಣಾರೆ ಕಂಡಿದ್ದೇನೆ.

ಇನ್ನು ಪಾತ್ರಚನ್ನಾಗಿ ಮಾಡಿ ಹೆಸರು ಮಾಡಿದರೂ ಕೆಲವೊಮ್ಮೆ ಪಾತ್ರಗಳ ಜೊತೆಯಲ್ಲಿ ಅವರ ಹೆಸರು ತಗುಲು ಹಾಕಿಕೊಳ್ಳುವ ಸಂದರ್ಭವೂ ಉಂಟು. ಅವರಿಗೆ ನಾನಾ ರೀತಿಯ ಅಡ್ಡ ಹೆಸರುಗಳನ್ನು ಇಟ್ಟು ಹೋಗುತ್ತಾ ಬರುತ್ತಾ ರೇಗಿಸುತ್ತಾ ತಮ್ಮ ಜೀವನ ಪ್ರೀತಿಯನ್ನು ವ್ಯಕ್ತಪಡಿಸುತ್ತಾ ಅವರ ಕಾಲು ಎಳೆಯುತ್ತಾರೆ. ಅದರಲ್ಲೂ ಕೀಚಕ, ಶಕುನಿ, ರಾವಣ ಮುಂತಾದ ಖಳಪಾತ್ರಗಳಿಂದ ಹೆಸರು ಗಳಿಸಿದ್ದಲ್ಲಿ ನಿಜವ್ಯಕ್ತಿಗಳಿಗೆ ಅವೇ ಅನ್ವರ್ಥನಾಮಗಳಾಗಿ ಬಿಡುತ್ತವೆ. ನಮ್ಮೂರಿನದೇ ಒಂದು ಅನುಭವ. 'ಶ್ರೀಕೃಷ್ಣಗಾರುಡಿ' ನಾಟಕದಲ್ಲಿ ಗಾರುಡಿ ಪಾತ್ರವನ್ನು ಮಾಡಿದ ಒಬ್ಬಾತನಿಗೆ ಗಾರುಡಿ ಎಂಬುದೇ ಅವನು ಸಾಯುವ ತನಕ ಅಡ್ಡ ಹೆಸರಾಗಿ ನಿಂತುಬಿಟ್ಟಿತ್ತು. ಇದು ಖುಷಿಪಡುವ ವಿಚಾರವಾದರೂ ಗಾರುಡಿ ಪದ ನಿಂದನೆಯ, ಕುಚೇಷ್ಟೆಯ ದನಿಯಲ್ಲಿ ಬಳಕೆಯಾಗುತ್ತಿದ್ದರಿಂದ ಕೇಳಲು ಅವರಿಗೆ ಕಿರಿಕಿರಿಯಾಗುತ್ತಿತ್ತು. ಅವನ ಮಡದಿ ಮಕ್ಕಳಿಗೂ ಗಾರುಡಿ ಪದದ ಮೂಲಕವೇ ಗುರುತಿಸುವ ರೀತಿ ಮಾತ್ರ ವಿಚಿತ್ರವಾಗಿತ್ತು.

ಪೋಸ್ಟರ್ ಮಾಡಿಸುವಾಗ ಅಲ್ಲಿ ಊರಿನ ಕೆಲವು ಮುಖಂಡರ ಹೆಸರುಗಳನ್ನು ಹಾಕಿಸುವುದು ರೂಢಿ. ಎಷ್ಟೇ ಜಾಗ್ರತೆ ವಹಿಸಿದರೂ ಎಲ್ಲರ ಹೆಸರು ಹಾಕಲು ಸಾಧ್ಯವಿಲ್ಲವಾದ್ದರಿಂದ ಅಸಮಾಧಾನಕ್ಕೆ ಇಲ್ಲಿ ಅವಕಾಶ ಇದ್ದೇ ಇದೆ. ಹೆಸರು ಬಿಟ್ಟು ಹೋದವರ ಅಸಹನೆ ಅಷ್ಟಿಷ್ಟಲ್ಲ. ನಾಟಕದ ದಿನ ಅದನ್ನು ಅವರು ಹೇಗೋ ತೀರಿಸಿಕೊಂಡು ಸಮಾಧಾನ ತಾಳುವ ತಂತ್ರವನ್ನು ಕಂಡುಕೊಂಡಿದ್ದರೂ ಆಶ್ಚರ್ಯವಿಲ್ಲ. ಪೋಸ್ಟರ್ನಲ್ಲಿ ಹೆಸರು ಸಿಕ್ಕವರಿಗೆ ಖುಷಿ, ಸಿಗದವರಿಗೆ ಬೇಸರ, ಅಸಹನೆ. ಎಲ್ಲರ ಹೆಸರನ್ನು ಹಾಕುವುದು ಎಂದಿಗೂ ಸಾಧ್ಯವಿಲ್ಲ ಎಂಬ ಅರಿವು ತುಂಬಾ ಜನಕ್ಕೆ ಬರೋದೇ ಇಲ್ಲ. ಸ್ಟೇಜಿನಲ್ಲಿ ಅನಗತ್ಯ ಕಿರಿಕಿರಿ ಮಾಡುವ ಕಿಡಿಗೇಡಿಗಳು, ಕುಡಿತದ ಅಮಲಿನ ನೆಪದಲ್ಲಿ ತಮ್ಮ ಅಸಹನೆ ಕಾರಿಕೊಳ್ಳುವ 'ದುಷ್ಟ'ರೂ ಆಗಿ ಬಿಡುವುದುಂಟು.

ಪಾತ್ರಧಾರಿಗಳು ನಾಟಕದ ವೇಷಭೂಷಣದಲ್ಲಿ ಫೋಟೋವನ್ನು ತಮ್ಮ ಫೋಟೋವನ್ನು ತೆಗೆಸಿ ಕಟ್ಟು ಹಾಕಿಸಿ ಗೋಡೆಗೆ ತಗಲು ಹಾಕಿರುವ ಎಷ್ಟೋ ಕಲಾವಿದರ ಮನೆಗಳು ಇವೆ. ಹಳ್ಳಿ ಜನರ ನಾಟಕ ಪ್ರೇಮ ಮನೆಗೆ ಬಂದ ಬಂಧು ಬಾಂಧವರಿಗೂ ಈ ಮೂಲಕ ದರ್ಶನವಾಗುತ್ತದೆ. ಪಾತ್ರಧಾರಿಗಳು ಕೆಲವೇ ಪಾತ್ರಗಳಿಗೆ ಬ್ರಾಂಡ್ ಆಗುವ ಅಪಾಯವೂ ಉಂಟು. ಕಲೆ ಮಾನವನ ಮನಸ್ಸನ್ನು ಕರಗಿಸಬಲ್ಲದು. ನಾಟಕ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಆ ಕೆಲಸ ಮಾಡುತ್ತಿದೆ. ಇವರು ವಾಸ್ತವವಾಗಿ ನಿಜಕ್ಕೂ ಕಲಾರಾಧಕರು, ಕಲಾವಿದರ ಆರಾಧಕರು. ಆದರೆ ಊರ ಜನಗಳ ದೃಷ್ಟಿಯಲ್ಲಿ ಶೋಕೀಲೋಲರು. ಅತಿಯಾದರೆ ಅಮೃತವೂ ವಿಷ

ಅಲ್ಲವೇ? ಹೀಗೆ ನಾಟಕ ಹಿರಿಯರಿಗೆ, ಪಾತ್ರಧಾರಿಗಳಿಗೆ ವಿಶೇಷ ಅನುಭವಗಳನ್ನು ದೊರಕಿಸಿಕೊಡಬಲ್ಲದು.

### ೩.'ಸೂಳೆ'ಯರ ಪರದಾಟ

ಹಳ್ಳಿಯಲ್ಲಿ ನಾಟಕ ಎಂದಾಗ ಪ್ರಧಾನ ಆಕರ್ಷಣೆಯ ಬಿಂದು ಈ 'ಸೂಳೆ'ಯರದ್ದು. ಇದೇನು ಇಷ್ಟು ಕರ್ಕಶವಾದ ಪದಪ್ರಯೋಗ ಎನ್ನುತ್ತೀರಾ? ನಮ್ಮ ಊರಿನಲ್ಲಿ ಲೇಡೀಸ್ ಆರ್ಕ್ಟರ್ಸ್ ಅನ್ನು ಕರೆಯೋದೇ ಹೀಗೆ. 'ಸೂಳೆಯರು ಬಂದರೇ?" "ಸೂಳೆಯರು ರೆಡಿಯಾದರೆ..?" ಈ ಮಾತುಗಳನ್ನು ಸಹಜ ಎಂಬಂತೆ ಬಳಸಿಬಿಡುತ್ತಾರೆ. ಅವರ ಕಿವಿಗೆ ಏನಾದರೂ ಇದು ಬಿದ್ದಲ್ಲಿ ಬಹುಃಶ ಅವರು ನಾಟಕ ಆಡುವ ಆಸಕ್ತಿಯನ್ನೇ ಕಳೆದುಕೊಳ್ಳುವ ಸಂಭವವೇ ಹೆಚ್ಚು. ಚಿಕ್ಕ ವಯಸ್ಸಿನಲ್ಲಿ ನಾವು ನಾಟಕದ ದಿನ ಸುಮಾರು ಏಳು-ಏಳೂವರೆಗೆ ಆಗಮಿಸುವ ಈ 'ಸೂಳೆ'ಯರನ್ನು ನೋಡಲು ಕಾದು ಕೂರುತ್ತಿದ್ದೆವು. ನಾಟಕ ನಡೆಯುವ ಸ್ಟೇಜಿನ ಪಕ್ಕದ ಮನೆಯಲ್ಲಿ ಅವರಿಗೆ ಮೇಕಪ್ ಮಾಡುವ ವ್ಯವಸ್ಥೆ ಇರುತ್ತಿತ್ತು. ಆಗ ನಾವು ಬಾಗಿಲ ಸಂಧಿ, ಕಿಟಕಿಗಳ ಮೂಲಕ ಅವರನ್ನು ನೋಡಲು ತವಕಿಸುತ್ತಿದ್ದೆವು. ತುಂಬಾ ಹೊತ್ತು ಕಾದ ಅನಂತರ ಅವರು ರೆಡಿಯಾಗಿ ಹೊರ ಬಂದಾಗ ವಿಶಿಷ್ಟವಾದ ಅನುಭವವೇ ಆಗುತ್ತಿತ್ತು. ಈ ಸಿದ್ಧತೆಯ ಕೊಠಡಿಗೂ ಕೆಲವು ಪಾತ್ರಧಾರಿಗಳು ಪ್ರವೇಶ ಮಾಡಿ ತಮ್ಮ 'ರಸಿಕತನ'ವನ್ನು ತೋರಿಸದೇ ಬಿಡುತ್ತಿರಲಿಲ್ಲ! ಹೀಗೆ ಕಲಾವಿದೆಯರು 'ಸೂಳೆ' ಎಂಬ ಅಭಿದಾನದಲ್ಲಿ ನಾಟಕವನ್ನು ನಡೆಸುವ ಪರಿ ಗಮನಾರ್ಹ. ಆದರೆ ಇಂತಹ ಕಲಾವಿದೆಯರನ್ನೂ ಮೋಹಿಸಿ ಅವರಲ್ಲಿ ಪ್ರೇಮಭಿಕ್ಷೆ ಬೇಡುತ್ತಾ ಅವರನ್ನೇ ಮದುವೆಯಾಗಲು ಹೊರಟ ಕಲಾವಿದರೂ ಇದ್ದರು. ನನ್ನ ಸ್ನೇಹಿತನೊಬ್ಬ ಒಬ್ಬ ಕಲಾವಿದೆಯ ಹಿಂದೆ ಬಿದ್ದು ಅವರು ಎಲ್ಲೆಲ್ಲಿ ನಾಟಕ ಆಡುತ್ತಾರೆ ಅಲ್ಲಲ್ಲಿಗೆ ಹೋಗಿ ಅವರಿಗೆ ಹೂವು ಹಣ್ಣುಗಳನ್ನು ಉಡುಗೊರೆಯಾಗಿ ನೀಡಿ ಅವರು ಚೆನ್ನಾಗಿ ಮಾತನಾಡಿಸಿದರು ಎಂದು ನನ್ನ ಬಳಿ ಹೇಳಿಕೊಳ್ಳುತ್ತಿದ್ದುದು ಈಗಲೂ ನೆನಪಿದೆ. 'ರಂಗನಾಯಕಿ'ಯ ಅಶೋಕ್ ನಂತೆ ಕಂಗೆಟ್ಟಿದ್ದ ಕಲಾವಿದನಾತ. ಒಮ್ಮೆ ಅವನು ಮನಬಿಚ್ಚಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದ. ಕಲಾವಿದೆ ನಯವಾಗಿ ತಿರಸ್ಕರಿಸಿದಾಗ ತುಂಬಾ ನೊಂದುಕೊಂಡರೂ ಈಗ ಎಲ್ಲವನ್ನೂ ಮರೆತು ಚೆನ್ನಾಗಿ ಜೀವಿಸುತ್ತಿದ್ದಾನೆ...

ಪಾತ್ರಧಾರಿಯ ಜೊತೆಯಲ್ಲಿ ಕಲಾವಿದೆ ನೃತ್ಯ ಮಾಡುತ್ತಿದ್ದರೆ ಪಾತ್ರಧಾರಿಯ ಹೆಂಡತಿ ಅದನ್ನು ಕಣ್ಬಿಟ್ಟುಕೊಂಡು ನೋಡುತ್ತಾಳೆ! ಅವಳಿಗೆ ಅಕ್ಕಪಕ್ಕದವರು ಕಲಾವಿದೆಯನ್ನು 'ಸವತಿ' ಎಂಬಂತೆ ಕಣ್ಣೋಟ ಬೀರುವ ಗಳಿಗೆಗಳೂ ಉಂಟು.

ಅದನ್ನು ಹೆಮ್ಮೆಯಿಂದಲೇ ನಗುತ್ತಾ ಸ್ವೀಕರಿಸಿದ ಪಾತ್ರಧಾರಿಗಳ ಪತ್ನಿಯರಿಗೇನೂ ಕಡಿಮೆಯಿಲ್ಲ.ಪಾತ್ರಧಾರಿಗಳು ಮಹಿಳಾ ಪಾತ್ರಗಳೊಡನೆ ಮುಕ್ತವಾಗಿ ವ್ಯವಹರಿಸುವುದನ್ನು ಅವರ ಹೆಂಡತಿಯರು ಅದಾವ ದೃಷ್ಟಿಯಲ್ಲಿ, ಯಾವ ಕಣ್ಣಲ್ಲಿ ನೋಡಿ ಮೆಚ್ಚುತ್ತಾರೋ ಎಂಬುದು ಕುತೂಹಲಕರ. ಇದು ಕಲೆ ಎಂದು ತಿಳಿದು ಬಿಡುವ ಜಾಯಮಾನ ಅಲ್ವೇ ಅಲ್ಲ. ಅವರು ಗಂಡಸರು ಏನು ಮಾಡಿದರು ನಡೆಯುತ್ತದೆ ಎಂಬುದೇ ಪ್ರಧಾನ. ಹಾಗಾಗಿ ಮೇಲ್ನೋಟಕ್ಕೆ ಮೆಚ್ಚುವಂತೆ ಕಂಡರೂ ನಿಜವಾಗಿ ನಟಿಸುವವರು ಪಾತ್ರಧಾರಿಗಳ ಹೆಂಡತಿಯರೇ! ಆದರೂ ಮೇಕಪ್ ಇಲ್ಲದ ಆ ನಟನೆಯ ಹಿಂದೆ ಎಂಥಾ ಅಸಹಾಯಕತೆ! ಅದೆಂತಹ ನೋವು! ಇದೇ ಸನ್ನಿವೇಶವನ್ನು ವಿರುದ್ಧ ಸ್ಥಿತಿಯಲ್ಲಿ ಕಲ್ಪಿಸಲೂ ಸಾಧ್ಯವಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯ ಪ್ರಭಾವ ಅಂತಹದ್ದು.!

ಪ್ರಾಕ್ಟೀಸ್ ಮಾಡುವ ಸ್ಥಳಕ್ಕೂ ಕೂಡ ಹೆಣ್ಣುಮಕ್ಕಳಿಗೆ ಮುಕ್ತ ಅವಕಾಶ ಇಲ್ಲ. ಮನೆಯವರು ಅಲ್ಲಿಗೂ ಕೂಡ ಸುಲಭದಲ್ಲಿ ಕಳಿಸುವುದಿಲ್ಲ. ಜೊತೆಗೆ ಹೆಣ್ಣು ಮಕ್ಕಳನ್ನು ಊರಿನ ನಾಟಕದಲ್ಲಿ ಸೇರಿಸಿಕೊಂಡದ್ದು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಆದರೆ ಹುಡುಗರನ್ನು ಅದೂ ಫ್ರೀಯಾಗಿ ಚಿಕ್ಕ ಚಿಕ್ಕ ಪಾತ್ರಗಳಿಗೆ ಖುಷಿಯಿಂದ ಸೇರಿಸಿಕೊಂಡು ನಾಟಕ ಆಡಿದ ನಿದರ್ಶನಗಳಿವೆ. ಆದರೆ ಹೊರಗಿನ 'ಸೂಳೆ'ಯರ ಮೇಲೆ ಮಾತ್ರ ಅಪಾರ ಪ್ರೇಮ! ಇಲ್ಲಿ ಕಲಾವಿದೆಯರ ಸ್ಥಿತಿ ನಿಜಕ್ಕೂ ಚಿಂತಾಜನಕ. ಬಹುತೇಕ ಕಲಾದೃಷ್ಟಿ ಹೋಗಿ ಕಾಮ ದೃಷ್ಟಿಯೇ ಮುಂದಾದ ಪರಿಣಾಮವಿದು. ಪುರುಷಪಾತ್ರಧಾರಿಗಳ ಕುರಿತು ತುಂಬು ಅಭಿಮಾನದಿಂದ ಕೊಂಡಾಡುವ ನಮ್ಮ ಸಮಾಜಕಲಾವಿದೆಯರನ್ನುಮಾತ್ರ ಕೇವಲ ಕಾಮದೃಷ್ಟಿಯಿಂದ, ಹಗುರವಾಗಿ ನೋಡುವ ಈ ನೋಟ ಕ್ರಮ ಖಂಡಿತಾ ಬದಲಾಗಬೇಕಿದೆ. ಆದರೆ ಅದು ಹೇಗೆ ಎಂಬುದೇ ಇಂದಿನ ಯಕ್ಷಪ್ರಶ್ನೆ. ಒಟ್ಟಾರೆ ಇಡೀ ನಾಟಕ ಪ್ರಕ್ರಿಯೆಯೇ ಸ್ತ್ರೀಗೆ ನಿಷಿದ್ಧ 'ಸೂಳೆ'ಯರನ್ನು ಹೊರತುಪಡಿಸಿ!

ವಾಸ್ತವವಾಗಿ ಕಲಾವಿದರು ರಸಿಕರೆ. ಆದರೆ ಶೋಕಿಲೋಲರು ಎಂದು ಕುಪ್ರಸಿದ್ಧಿ ಪಡೆದುಕಾರಣ ವಾಸ್ತವ ಪ್ರಪಂಚದಲ್ಲಿ ಅವರು ಅದೇ ಗುಂಗಿನಲ್ಲಿ ಇದ್ದುಕೊಂಡು ಸೋಮಾರಿಗಳಾದ ಉದಾಹರಣೆಗಳು ಉಂಟು. ಆದುದರಿಂದ ಈ ನಾಟಕ ಕಲೆಯೇ ಸರಿ ಇಲ್ಲ, ಅದೊಂದು ಅಮಲು ತರಿಸುವ ಕಲೆ ಎಂಬ ಅಭಿಪ್ರಾಯವೂ ಬಂದಿದೆ. ಏನೇ ಆಗಲಿ ಸಾಮಾಜಿಕ ಮಾಧ್ಯಮಗಳ ಭರಾಟೆಯ ಈ ಕಾಲದಲ್ಲೂ ಅವರ ಉತ್ಸಾಹ ಮೆಚ್ಚಲೇಬೇಕು. ಗ್ಯಾರೇಜ್ನಲ್ಲಿ ಕೆಲಸ ಮಾಡುವ ತಮ್ಮನೊಬ್ಬ ಓದಿನ ತುಂಬಾ ಆಸಕ್ತಿಯನ್ನೂ ಹೊಂದಿರುವುದನ್ನ ಗಮನಿಸಿಅತ್ತಿಗೆಯೊಬ್ಬಳು ತನ್ನ ಮಾಂಗಲ್ಯವನ್ನು

ಮಾರಿ ಮೈದುನನ್ನು ಓದಿಸುವ ಕಥಾವಸ್ತು ಹೊಂದಿದ್ದ ಸಾಮಾಜಿಕ ನಾಟಕವೊಂದು ನಮ್ಮ ಊರಿನಲ್ಲಿ ಜನರ ಮೆಚ್ಚುಗೆ ಪಡೆದಿತ್ತು. ಅಶ್ಲೀಲ ಸಂಭಾಷಣೆಯ ಹಾವಳಿಯಿಂದ ಸಾಮಾಜಿಕ ಎಂದರೆ ಮುಖಮುರಿಯುವ ಹಂತಕ್ಕೆ ಬಂದದ್ದು ವಿಪರ್ಯಾಸ. ಹಾಗಾಗಿಯೇ ಇಂದು ನಾಟಕ ಎಂದರೆ ಶೋಕಿಲೋಲರ, ಸೋಮಾರಿಗಳ ಆಟ ಎಂಬಂತಾಗಿದೆ. ಕಲೆ ಮತ್ತು ಬದುಕನ್ನು ವಿಂಗಡಿಸಿ ನೋಡಲಾರದ ಸ್ಥಿತಿಯಿದು.

ಊರಿನಲ್ಲಿ ನಾಟಕವನ್ನು ಕೇವಲ ಕಲೆಯ ರೂಪದಲ್ಲಿ ಮಾತ್ರವಲ್ಲ, ನಾಟಕದ ಪಾತ್ರಧಾರಿಗಳನ್ನೇ ನಿಜ ಎಂಬಷ್ಟು ಗಾಢವಾಗಿ ನಂಬಿ ಬಿಡುವ ಸಹೃಯರೂ ಉಂಟು. ಶಿವ, ಕೃಷ್ಣ ಮುಂತಾದ ದೈವ ಪಾತ್ರಗಳು ವೇದಿಕೆಗೆ ಬಂದಾಗ ಕೈ ಮುಗಿಯುವವರೆಗೇನೂ ಕಡಿಮೆಯಿಲ್ಲ. ಆದರೆ ತುಂಬಾ ಕಷ್ಟದ ಪಾತ್ರಗಳನ್ನು ಮಾಡಿದವರು ಬದುಕಿನಲ್ಲೂ ಕೂಡ ಕಷ್ಟಗಳನ್ನು ಅನುಭವಿಸುತ್ತಾರೆ ಎಂಬ ನಂಬಿಕೆಯೊಂದು ಕೆಲಸ ಮಾಡಿದೆ. ನಮ್ಮ ತಾಯಿಯ ಸೋದರ ಮಾವ ತುಂಬಾ ಬಾರಿ ಕರ್ಣನ ಪಾತ್ರವನ್ನು ಮಾಡಿದ್ದರಿಂದಲೇ ತುಂಬಾ ಕಷ್ಟಕ್ಕೆ ಗುರಿಯಾದ ಎಂದು ಅವ್ವ ಹಲವು ಬಾರಿ ನನಗೆ ಹೇಳಿದ್ದಾಳೆ. ಹಾಗೆಯೇ ರಾಕ್ಷಸ/ಖಳ ಪಾತ್ರಗಳನ್ನು ಮಾಡುವವರೆಗೂ ಅಷ್ಟು ಶ್ರೇಯಸ್ ಅಲ್ಲ ಅನ್ನೋ ನಂಬಿಕೆಯೂ ಕೆಲಸ ಮಾಡಿದೆ.

## ೪.ಜಾತಿ ಬೇರಿನಾಟ

ನಮ್ಮ ಊರಿನಲ್ಲಿ ನಾಟಕ ನಡೆಯುವುದು ಜಾತಿಯಲ್ಲಿ ಮೇಲ್ವರ್ಗದ ಮನೆಯವರ ಮುಂದಿನ ವಿಶಾಲ ಅಂಗಳದಲ್ಲಿ. ಊರಿನಲ್ಲಿ ಪರಿಶಿಷ್ಟ ಜಾತಿಯವರ ಸಂಖ್ಯೆಯೂ ಸರಿಸಮಾನವಾಗಿ ಇರುವುದರಿಂದ ಆ ಜಾತಿಯ ಪ್ರೇಕ್ಷಕರನ್ನು ಬೇರ್ಪಡಿಸಲು ನಾಟಕದ ಮುಂಭಾಗದ ಸ್ಟೇಜಿನ ಮಧ್ಯಕ್ಕೆ ಸರಿಯಾಗಿ ಒಂದು ಉದ್ದವಾದ ಹಗ್ಗವನ್ನು ಕಟ್ಟಿ ಬಿಡುತ್ತಾರೆ. ಇದು ಜಾತಿಭೇದದ ಗೋಡೆಯಂತೆ ಸಾಂಕೇತಿಕವಾಗಿದೆ. ವಿಶೇಷವೆಂದರೆ ತಳವರ್ಗದವರು ನಾಟಕ ಆಡುವಾಗಲೂ ಅವರೇ ಗೂಟಗಳನ್ನು ನೆಟ್ಟು ಹಗ್ಗವನ್ನು ಭದ್ರವಾಗಿಯೇ ಬಿಗಿಯುತ್ತಾರೆ. ಮೇಲ್ವರ್ಗದ ಜನ ಬಂದು ತಮ್ಮ ನಾಟಕ ನೋಡಲಿ ಎಂಬುದೇ ಅವರ ಮಹದಾಸೆ. ಹಳ್ಳಿಯಲ್ಲಿ ಜಾತಿ ಹೇಗೆ ತನ್ನ ನೆಲೆಯನ್ನು ಸ್ಥಿರವಾಗಿ ಉಳಿಸಿಕೊಂಡಿದೆ ಎಂಬುದಕ್ಕೆ ಸಂಕೇತದಂತಿದೆ ಈ ಹಗ್ಗದ ಗೋಡೆ!

ಇನ್ನೊಂದು ವಿಶೇಷ ಎಂದರೆ ಇಂತಿಂಥ ನಾಟಕವನ್ನು ಇದೇ ಸಮುದಾಯದವರು ಮಾಡೋದು ಸೂಕ್ತ. ಅದು ಅವರಿಗೇ ಶ್ರೇಯಸ್ಸು ಎಂಬ ನಂಬಿಕೆಯೊಂದಿದೆ. ನಮ್ಮಲ್ಲಿಯೇ ಸಿದ್ದಪ್ಪಾಜಿ ಪವಾಡಗಳು, ಮಂಟೇಸ್ವಾಮಿ ಕಥಾ ಪ್ರಸಂಗ ನಾಟಕಗಳನ್ನು ವಿಶ್ವಕರ್ಮ ಜನಾಂಗದವರೇ ಮಾಡಬೇಕು ಎಂಬ ನಂಬಿಕೆ

ಗಾಢವಾಗಿದೆ. ವಾಸ್ತವವಾಗಿ ಮಂಟೇಸ್ವಾಮಿ ಜಾತಿಯಲ್ಲಿ ತಳವರ್ಗದವರು, ನಾಟಕ ಆಡುವವರು ವಿಶ್ವಕರ್ಮರು. ನೋಡುವವರು ಮಾತ್ರ ಮಧ್ಯಮ ಜಾತಿವರ್ಗದವರು! ಇದಲ್ಲವೆ ವೈಚಿತ್ರ!

ನಾಟಕದ ಅಮಲು ಹತ್ತಿಸಿಕೊಂಡವರು ಎಂಥ ಕೆಲಸಗಳಿಗೂ ಕೈ ಹಾಕುತ್ತಾರೆ ಎಂಬುದೂ ಕುತೂಹಲಕರವಾದುದು. ಸಾಲ ಮಾಡಿ ಆದರೂ ನಾಟಕ ಆಡುವ ಗಂಡಂದಿರ ಶೋಕಿಯನ್ನು ಮೆಚ್ಚುವ 'ಸತಿ'ಯರೂ ಇದ್ದಾರೆ. ನಮ್ಮ ಮಾವ ಪ್ರತಿವರ್ಷ ಭಾರಿ ಪ್ರಮಾಣದಲ್ಲಿ ಹುಣಸೆ ಹಣ್ಣುಗಳನ್ನು ಬಿಡುತ್ತಿದ್ದ ಮರವನ್ನೇ ಮಾರಿ ನಾಟಕ ಆಡಿದ ಭೂಪ! ಹುಣಸೆ ಆರೋಗ್ಯಕ್ಕೆ ಪೂರಕ, ನಿಜ. ನಾಟಕ ಕೂಡ ಮನಸ್ಸಿನ ಆರೋಗ್ಯಕ್ಕೆ ಒಳಿತಲ್ಲವೇ ಎಂಬುದು ಅವನ ಲೆಕ್ಕಾಚಾರವಾಗಿತ್ತೇನೋ ಎಂದು ನಮಗೆ ನಾವೇ ಇಂದುಸಮಾಧಾನ ಮಾಡಿಕೊಳ್ಳಬೇಕಷ್ಟೇ!

ನಾಟಕ ಆಡಿದಾಗ ನೆಂಟರಿಷ್ಟರು ಪಾತ್ರಧಾರಿಗಳಿಗೆ ಉಡುಗೊರೆಗಳನ್ನು ನೀಡುವುದು ರೂಢಿ. ಇದು ಕೆಲವೊಮ್ಮೆ ಹತ್ತಿರದವರನ್ನು ಇಕ್ಕಟ್ಟಿಗೆ ಸಿಕ್ಕಿಸುವ ಪ್ರಸಂಗವೂ ಆಗಬಹುದು. ತುಂಬಾ ನಿರೀಕ್ಷೆ ಉಳ್ಳ ಪಾತ್ರಧಾರಿಗಳಿಗೆ ಸರಿಯಾದ ಉಡುಗೊರೆ ಸಿಗದೇ ಹೆಚ್ಚಾದ ಸಾಲಬಾಧೆಯನ್ನು ಅನುಭವಿಸಿದ್ದೂ ಉಂಟು. ಹೀಗೆ ನಾಟಕ ನಮ್ಮನ್ನು ಎಲ್ಲೆಲ್ಲೋ ಕರೆದುಕೊಂಡು ಹೋಗುವ ಪರಿ, ಗ್ರಾಮೀಣ ರಂಗಭೂಮಿಯ ಸಾಮಾನ್ಯ ಲಕ್ಷಣ.

ಊರಿನಲ್ಲಿ ನಾಟಕ ಕೇವಲ ಕಲೆಯ ರೂಪದಲ್ಲಿ ಮಾತ್ರ ಅಲ್ಲ, ನಾಟಕದ ಪಾತ್ರಧಾರಿಗಳನ್ನೇ ನಿಜವೇ ಎಂಬಷ್ಟು ಗಾಢವಾಗಿ ನಂಬಿ ಬಿಡುವವರೂ ಉಂಟು. ಶಿವ, ಕೃಷ್ಣ ಮುಂತಾದ ದೈವ ಪಾತ್ರಗಳು ವೇದಿಕೆಗೆ ಬಂದಾಗ ಕೈ ಮುಗಿಯುವವರಿಗೇನೂ ಕಡಿಮೆಯಿಲ್ಲ. ಆದರೆ ದುರಾದೃಷ್ಟದ /ಕಷ್ಟದ ಪಾತ್ರಗಳನ್ನು ಮಾಡಿದವರು ಬದುಕಿನಲ್ಲೂ ಕೂಡ ಕಷ್ಟಗಳನ್ನು ಅನುಭವಿಸುತ್ತಾರೆ ಎಂಬ ನಂಬಿಕೆಯೊಂದು ಗಾಢವಾಗಿದೆ. ನಮ್ಮ ತಾಯಿಯ ಸೋದರ ಮಾವ ಹಲವು ಬಾರಿ ಕರ್ಣನ ಪಾತ್ರವನ್ನು ಮಾಡಿದ್ದರಿಂದಲೇ ಬದುಕಿನಲ್ಲೂ ಕಷ್ಟಕ್ಕೆ ಗುರಿಯಾದ ಎಂದು ಅವ್ವ ಹಲವು ಬಾರಿ ಹೇಳಿದ್ದಾಳೆ. ಹಾಗೆಯೇ ರಾಕ್ಷಸ/ಖಳ ಪಾತ್ರಗಳನ್ನು ಮಾಡುವವರಿಗೂ ಅಷ್ಟು ಶ್ರೇಯಸ್ ಅಲ್ಲ ಅನ್ನೋ ನಂಬಿಕೆ ಹೇಗೋ ಚಾಲ್ತಿಯಲ್ಲಿದೆ. ಊರಿನ ಜನರ ಮುಂದೆ ಅಬ್ಬರಿಸಿ ತಮ್ಮ ಪ್ರತಾಪ ತೋರಿಸಲು ಇದೇ ಖಳಪಾತ್ರಗಳೇ ಕೈಹಿಡಿಯುವುದನ್ನು ಕೂಡ ಮರೆಯುವಂತಿಲ್ಲ.

ಊರಿನಲ್ಲಿ ಮಾರಿಹಬ್ಬ ಇತ್ಯಾದಿ ವಿಶೇಷ ದಿನಗಳಲ್ಲಿ ನಾಟಕ ಆಡುವುದು ರೂಢಿ.

ISSN : 3048-7137

ಅದೂ ಬೇಸಿಗೆಯಲ್ಲಿ. ಒಂದೇ ವರ್ಷದಲ್ಲಿ ಎರಡು/ ಮೂರು ನಾಟಕ ಆಡಿದ ನಿದರ್ಶನಗಳೂ ಇವೆ. ಆದರೆ ಇಲ್ಲೂ ಕೂಡ ವಿವಿಧ ಜಾತಿಗಳ ಜನ ಒಗ್ಗೂಡುವುದಿಲ್ಲ. ಹಳ್ಳಿಯವರ ಕಲಾಪ್ರೀತಿಯ ಬಗೆಗೆ ಏನೇ ಮೆಚ್ಚುಗೆ ಇದ್ದಾಗ್ಯೂ ಜಾತಿಯ ಯಥಾಸ್ಥಿತಿ ಅಪಾಯಕಾರಿಯೇ ಸರಿ. ತಳವರ್ಗಗಳು ಬೇರೆ ಬೇರೆ ಗುಂಪುಗಳು ಮಾಡಿಕೊಂಡು ನಾಟಕ ಆಡುತ್ತಾರೆ. ನಾಟಕದಲ್ಲಾದರೂ ಎಲ್ಲರೂ ಒಗ್ಗೂಡಿ ಪಾತ್ರವಹಿಸಿದ್ದು ಹಳ್ಳಿಯಲ್ಲಿ ಇಲ್ಲವೆಂದೇ ಹೇಳಬೇಕು. ಆದರೆ ಸಾಮಾಜಿಕವಾಗಿ ಮೇಲ್ವರ್ಗ ಎನಿಸಿಕೊಂಡ ಬ್ರಾಹ್ಮಣ ವರ್ಗದವರನ್ನು ಒಬಿಸಿ ವರ್ಗದವರು ಜೊತೆಯಲ್ಲಿ ಸೇರಿಸಿಕೊಂಡು ನಾಟಕ ಆಡಿದ ಉದಾಹರಣೆಗಳು ಉಂಟು ಆದರೆ ಅವರಿಗೆ ನೀಡುವ ಪಾತ್ರಗಳು ಸಾಮಾನ್ಯವಾಗಿ ಅದೇ ಸಮುದಾಯದ್ದೇ ಆಗಿರುವ ಸಾಧ್ಯತೆಯೇ ಹೆಚ್ಚಿದ್ದು ಬಡಬ್ರಾಹ್ಮಣ ಎಂಬ ಸಂಕಥನ ಜನರ ಮನಸಲ್ಲಿ ಬೇರೂರಲು ಕಾರಣವಾಗಿದೆ.

## ೫. ಮೇಷ್ಟ್ರು ಮಂತ್ರದಾಟ

ನಾಟಕದ ಬಗೆಗೆ ಅತಿ ಉತ್ಸಾಹವೋ ಪ್ರತಿಷ್ಠೆಯೋ ಕಾರಣವಾಗಿ ಒಂದೇ ಸಮುದಾಯದಲ್ಲಿ ಎರಡೆರಡು ತಂಡಗಳಲ್ಲಿ ನಾಟಕ ಆಡಿದ ನಿದರ್ಶನವೂ ಉಂಟು. ಇಲ್ಲೇನು ವಿಶೇಷ ಎಂದರೆ ನಾಟಕ ಕಲಿಸುವ ಮೇಷ್ಟ್ರು ವಿಚಾರದಲ್ಲಿ ವಿಶೇಷವೇ ಸರಿ. ಈ ಬಗೆಗೆ ಬಾಲ್ಯದಲ್ಲಿ ನಾವು ಹೊಸ ಹೊಸ ಕಥೆಗಳನ್ನು ಕೇಳಿದ್ದೆವು. ಒಬ್ಬ ನಾಟಕದ ಮೇಷ್ಟ್ರಿಗೆ ಎಷ್ಟೆಲ್ಲಾ ಮಂತ್ರಶಕ್ತಿ ಇತ್ತು ಅಂತ್ಹೇಳಿ ಪ್ರಚಾರ ಇತ್ತು ಎಂದರೆ ಅದು ಊರಲ್ಲೆಲ್ಲ ಹಬ್ಬಿತ್ತು. ಅವರು ನಾಟಕ ಮಾಡಿಸುವಾಗ ಮಳೆ ಬಂದಲ್ಲಿ ತನ್ನ ಮಂತ್ರಶಕ್ತಿಯಿಂದ ಮಳೆಯನ್ನು ಹೋಗಲಾಡಿಸುವ ವಿಶೇಷ ಶಕ್ತಿಯನ್ನು ವಶಪಡಿಸಿಕೊಂಡಿದ್ದರು ಎಂದು ನಂಬಲಾಗಿತ್ತು. ಅಷ್ಟು ಮಾತ್ರವಲ್ಲ ತನ್ನ ವಿರೋಧಿ ಗುಂಪು ಅಂದರೆ ಇನ್ನೊಂದು ನಾಟಕದ ಗುಂಪಿನವರು ನಾಟಕ ಆಡುವಾಗ ಮಂತ್ರಿಸಿ ಮಳೆ ಬರಿಸಿ ಕಿರುಕುಳ ಕೊಟ್ಟ ಉದಾಹರಣೆಯೂ ಊರಲ್ಲೆಲ್ಲಾ ಪ್ರಸಿದ್ಧಿ. ಒಬ್ಬ ನಾಟಕ ಮೇಷ್ಟ್ರು ಪರ ಊರಿಗೆ ಬಂದು ಈ ಮಟ್ಟದ ಜನಜನಿತ ಆದದ್ದು ರೋಚಕವೇ ಸರಿ. ನಮ್ಮ ಜನರ ಕಲಾಪ್ರೀತಿಯೇ ಗೌರವಾರ್ಥ ಪಡೆದು ಈ ನಂಬುಗೆ ಮೂಡಿತೋ ಏನೋ. ಗ್ರಾಮೀಣ ರಂಗಭೂಮಿಯಲ್ಲಿ ಇನ್ನು ಏನೇನೋ ಸ್ವಾರಸ್ಯಕರ ಸಂಗತಿಗಳು ಇವೆ.

ಈ ಮೇಷ್ಟ್ರು ಊಟ ತಿಂಡಿ, ಜೀವನಶೈಲಿಗಳು ಕೂಡ ಭಿನ್ನ. ತುಂಬಾ ಜನ ಸಾರಾಯಿ ಕುಡಿದು ಮಾಂಸ ತಿನ್ನುವ ವರ್ಗದವರೇ. ಸಸ್ಯಾಹಾರಿಗಳಾಗಿದ್ದವರು ಸಿಗರೇಟ್ ಬಿಡುವುದರಲ್ಲಿ ಯಶಸ್ವಿಯಾಗಿದ್ದರು. ಹೀಗೆ ನಾಟಕದ ಮೇಷ್ಟ್ರಿಗೆ ಪ್ರತಿನಿತ್ಯ ಬೇರೆ ಬೇರೆ ಪಾತ್ರಧಾರಿಗಳ ಮನೆಯಲ್ಲಿ ಊಟದ ವ್ಯವಸ್ಥೆ ಇರುತ್ತಿತ್ತು. ಒಂದು ರೀತಿಯಲ್ಲಿ

ಸುಮಾರು ಮೂರು –ನಾಲ್ಕು ತಿಂಗಳ ಕಾಲದ ನಾಟಕ ಅಭ್ಯಾಸದ ಅವಧಿ ಮೇಷ್ಟು ಪಾಲಿಗೆ ರಸದೌತಣದ ಗಳಿಗೆಗಳೇ. ನಿತ್ಯವೂ ವಿಶೇಷ ಭಕ್ಷ್ಯ ಭೋಜನಗಳೇ. ಆದರೆ ಪಚೀತಿ ಎಂದರೆ ಬಹುತೇಕ ಅನಕ್ಷರಸ್ತ ಪಾತ್ರಧಾರಿಗಳನ್ನೇ ಕೂಡಿಸಿಕೊಂಡು ಅವರಿಗೆ ಸಂಭಾಷಣೆಗಳನ್ನು ಕಲಿಸುತ್ತಾ ಹಾಡುಗಳನ್ನು ಹೇಳುತ್ತಾ ಇರುವಲ್ಲಿ ಅವರ ತಾಳ್ಮೆಯ ಕಟ್ಟೆ ಹೊಡೆಯುತ್ತಿತ್ತು. ಅವರು ನಿಜಕ್ಕೂ ಮೇಷ್ಟೇ ಸರಿ! ಮೇಷ್ಟು ಪದಕ್ಕೆ ಅನ್ವರ್ಥವಾಗಿ ಹಳ್ಳಿಯಲ್ಲಿ ಒಳ್ಳೆ ಹೆಸರನ್ನು ಗಳಿಸಿರುತ್ತಾರೆ. ನಾಟಕದ ದಿನಹತ್ತಿರ ಬಂದರೂ ಮಾತುಗಳನ್ನು ಸರಿಯಾಗಿ ಕಲಿಯದ ಪಾತ್ರಧಾರಿಗಳ ಬಗ್ಗೆ ತುಂಬಾ ಮೇಷ್ಟುಗಳು ತಲೆಕೆಡಿಸಿಕೊಂಡಿದ್ದಿಲ್ಲ. ಅವರ ಅನುಭವವೇ ಅವರಿಗೆ ತಲೆ ಕೆಡಿಸಿಕೊಳ್ಳಬಾರದು ಎಂದು ಕಲಿಸಿದ್ದರೆ ಆಶ್ಚರ್ಯವಿಲ್ಲ. ಇಲ್ಲಿ 'ಮೇಷ್ಟು' ಎಂಬ ಹೆಸರು ಸರ್ವರೀತಿಯಲ್ಲೂ ಅನ್ವರ್ಥವೇ ಸರಿ.

ಹಾಗಾಗಿ ನಾಟಕ ಆಡುವಾಗ ಸಂಭಾಷಣೆ ಮರೆತರೆ ಹಾರ್ಮೋನಿಯಂ ಜೋರಾಗಿ ಬಾರಿಸುತ್ತಾ ಅವರಿಗೆ ಗೊತ್ತಾಗುವ ರೀತಿಯಲ್ಲಿ ಸಂಭಾಷಣೆಯನ್ನು 'ಅಕ್ರಮವಾಗಿ' ಹೇಳಿಕೊಡುವ ಪರಿಪಾಠ. ಹೀಗೆ ಮಾಡುವಾಗ ಅಲ್ಲೂ ಆಭಾಸವಾದ ಪ್ರಸಂಗವೂ ಇದೆ. ಏನೇನೋ ಮುಗ್ಧತೆಯಿಂದ ಆಡಿದ ಮಾತುಗಳು ಅಶ್ಲೀಲ ಅರ್ಥ ಪಡೆದುಕೊಂಡ ಸಂದರ್ಭಗಳೂ ಇವೆ. ಒಮ್ಮೆ ಮೇಷ್ಟು ದನಿಯನ್ನು ಸ್ವಲ್ಪ ಏರಿಸಿ ಹೇಳಿ ಎಂಬ ಅರ್ಥದಲ್ಲಿ 'ಸ್ವಲ್ಪ ಎತ್ತಿ ಆಡಿ' ಎಂದು ಬಿಟ್ಟರು! ಹುಮ್ಮಸ್ಸುಗೊಂಡ ಪಾತ್ರಧಾರಿ ಕಲಾವಿದೆಯನ್ನು ತಬ್ಬಿಕೊಂಡು ಮೇಲೆತ್ತಲ್ ಹೋಗಿ ಒಡೆಸಿಕೊಂಡ ಪ್ರಸಂಗವನ್ನು ಈಗಲೂ ನೆನಪಿಸಿಕೊಳ್ಳುತ್ತಾರೆ. ಹಳ್ಳಿಯಲ್ಲಿ ನಾಟಕ ಎಂದರೆ ಹಾಸ್ಯನಾಟಕವೇ ಆಗಬೇಕಿಲ್ಲ. ಯಾವುದೇ ನಾಟಕವಾದರೂ ಹಾಸ್ಯರಸ ತಾನಾಗಿಯೇ ಸಹಜವಾಗಿ ಬೆರೆತು ಹೋಗುವ ಸಂದರ್ಭಗಳು ದಟ್ಟವಾಗಿವೆ.

ಸಾಮಾಜಿಕ ನಾಟಕಗಳಲ್ಲಿ ಅಶ್ಲೀಲ ಸಂಭಾಷಣೆಯನ್ನು ತರುವುದು ಅದ್ಭುತವಾದನಾಟಕಕಲೆಯಲ್ಲಿ ಮೊಸರಲ್ಲಿ ಕಲ್ಲು ಸಿಕ್ಕಿದ ಅನುಭವವೇ ಸರಿ. ಹಾಗಾಗಿಯೇ ಹಿರಿಯರು ಪೌರಾಣಿಕ ವಸ್ತುವಿಗೇ ಹೆಚ್ಚು ಒಲವನ್ನು ತೋರಿಸುತ್ತಾರೆ. ಇದಕ್ಕೆ ಇನ್ನೂ ಒಂದು ಕಾರಣವಿದೆ. ಪೌರಾಣಿಕ ನಾಟಕ ಎಂದಾಗ ಭಯ ಭಕ್ತಿ ಗೌರವ ಇರುತ್ತದೆ ಮತ್ತು ಪಾತ್ರಗಳ ಪರಿಚಯ ಇರುವುದರಿಂದ ನೋಡುಗರಿಗೆ ಸಹಜವಾಗಿ ಇಷ್ಟವಾಗುತ್ತದೆ ಸಾಮಾಜಿಕ ಕಥಾವಸ್ತು ತುಂಬಾ ಆಕರ್ಷಣೀಯವಾದರೂ ಕೂಡ ಅದು ವಿರುದ್ಧ ದಿಕ್ಕಿನಲ್ಲಿ ಚಲಿಸಿದ್ದು ಹೆಚ್ಚು ಸಂಭಾಷಣೆ ಮತ್ತು ವೇಷಭೂಷಣಗಳಲ್ಲಿ ಚಿತ್ರ ವಿಚಿತ್ರವಾಗಿ ಅದು ಮಾತುಗಳಲ್ಲಿ ಅಶ್ಲೀಲ ಅರ್ಥಗಳನ್ನು ತುಂಬಿ ಸಾಮಾಜಿಕ ನಾಟಕ ಎಂದರೆ ಅಶ್ಲೀಲವೇ ಎಂಬ ಅರ್ಥ ತಂದು ಬಿಟ್ಟಿದ್ದು ದುರಂತ. ಸಮಾಜದ

ISSN : 3048-7137

ಜೀವಂತ ಸಮಸ್ಯೆಗಳನ್ನು ಈ ನಾಟಕದ ಮೂಲಕ ತೋರಿಸುವ ಅದ್ಭುತಾವಕಾಶವನ್ನು ನಮ್ಮ ಹಳ್ಳಿಗಳು ಕಳೆದುಕೊಂಡವೇ ಎಂದು ಚಿಂತಿಸುವಂತಾಗುತ್ತದೆ.

ಊರಿನಲ್ಲಿ ನಾಟಕ ಎಂದಾಗ ಅದು ಸುತ್ತಮುತ್ತಲ ಹಳ್ಳಿಗಳಿಗೂ ಸುದ್ದಿ ಹಬ್ಬಿ ಪ್ರೇಕ್ಷಕರು ಬರುವುದುಂಟು. ಹೀಗೆ ಪರವೂರಿನಲ್ಲಿ ನಡೆದ ಒಂದು ಪ್ರಸಂಗ. ಊರಿನಿಂದ ಒಂದು ಗುಂಪು ಪಕ್ಕದ ಊರಿಗೆ ನಾಟಕ ನೋಡಲು ಹೊರಟಿತು. ನಾಟಕ ಸ್ಟೇಜ್‌ನ ಸ್ವಲ್ಪ ದೂರ ಪಕ್ಕದಲ್ಲಿ ಟೀ ವಡೆ ಚಕ್ಲಿ ನಿಪ್ಪಿಟ್ಟು ಇತ್ಯಾದಿ ಇಟ್ಟುಕೊಂಡು ಮಾರುತ್ತಿದ್ದರು. ಈ ಹೋಗಿದ್ದವರಿಗೆ ಕೈಯಲ್ಲಿ ಕಾಸಿಲ್ಲ. ಆದರೂ ತಿಂಡಿ ಮೇಲೆ ಆಸೆ. ಆಸೆಗಿಂತಲೂ ಹಸಿವು ಎನ್ನುವುದೇ ಹೆಚ್ಚು ಸೂಕ್ತ. ಅಲ್ಲಿ ಒಬ್ಬ ವಯಸ್ಸಾದ ಅಜ್ಜಿಯೊಬ್ಬಳು ಸೀಮೆಎಣ್ಣೆ ದೀಪವನ್ನು ಮುಂದೆ ಇಟ್ಟುಕೊಂಡು ಒಂದು ಬುಟ್ಟಿ ತುಂಬಾ ಚಕ್ಕಲಿ ನಿಪ್ಪಿಟ್ಟು ಹೊಡೆ ಇತ್ಯಾದಿ ಇಟ್ಟು ವ್ಯಾಪಾರ ಮಾಡುತ್ತಿದ್ದಳು. ಅದನ್ನು ನೋಡಿ ಇವರ ಬಾಯಲ್ಲಿ ನೀರು ಸುರಿಯಿತು. ತಕ್ಷಣ ಒಂದು ಉಪಾಯ ಹೊಳೆದು ಒಬ್ಬರಿಗೊಬ್ಬರು ಕಿವಿಯಲ್ಲಿ ಮಾತಾಡಿಕೊಂಡರು. ಥಟ್ಟನೆ ಒಬ್ಬಾತ ಸೀಮೆಎಣ್ಣೆ ದೀಪವನ್ನು ಆರಿಸಿದ. ಮತ್ತೊಬ್ಬ ಬುಟ್ಟಿಯ ಸಮೇತ ಪರಾರಿಯಾಗಿ ಬಿಟ್ಟ.ಎಷ್ಟು ದೂರ ಓಡಿದ ಎಂದರೆ ಅವನ ಸಂತಸಕ್ಕೆ ಪಾರವೇ ಇಲ್ಲ. ಗುಂಪಿನ ಇತರ ಸದಸ್ಯರು ನಿಧಾನವಾಗಿ ಅವನನ್ನು ಹಿಂಬಾಲಿಸುವ ಹೊತ್ತಿಗೆ ಅರ್ಧ ಬುಟ್ಟಿ ಖಾಲಿಯಾಗಿತ್ತಂತೆ. ಮನಸ್ಸಿನ ಹಸಿವನ್ನು ತೀರಿಸಲು ಹೋದ ಇವರಿಗೆ ದೇಹದ ಹಸಿವು ಎಂಥ ಕೆಲಸಕ್ಕೆ ದೂಡಿತು ಎಂಬುದು ಗಮನಾರ್ಹ.

ಅಕ್ಕಪಕ್ಕದ ಊರಿನವರು ನಾಟಕ ನೋಡಲು ನಮ್ಮೂರಿಗೆ ಆಗಮಿಸುವಂತೆ ಊರಿನ ಪ್ರಖ್ಯಾತ ಕಲಾವಿದರು ಮೈಸೂರಿನ ಟೌನ್ ಹಾಲ್ ಮುಂತಾದ ಕಡೆ ಹೋಗಿ ಅಭಿನಯಿಸಿದ ಉದಾಹರಣೆಗಳೂ ಉಂಟು. 'ದಾನಶೂರಕರ್ಣ'ದಂತಹ ಆಡಿಯೋ ರೂಪದ ನಾಟಕಗಳು ಇಂದಿಗೂ ನಮ್ಮಲ್ಲಿ ಗಾಢ ಅನುಭೂತಿಯನ್ನು ಉಂಟು ಮಾಡುವ ಪರಿ ನೆನೆದಾಗ ನಾಟಕ ಹೇಗೆ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿದೆ ಎಂಬುದು ತಿಳಿಯುತ್ತದೆ.

ಇಂದಿಗೂ ಗ್ರಾಮೀಣ ರಂಗಭೂಮಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಆಧುನಿಕತೆಯ ಭರಾಟೆಯ ನಡುವೆಯೂ ಅವರಕಲಾ ಪ್ರೀತಿ ಮಾಸಿಲ್ಲ. ಅದಕ್ಕೆ ಎಂದಿಗೂ ಅಳಿವಿಲ್ಲ. ನಾಟಕ ಊರಿನ ಜೀವಸ್ವರ, ಚಿಲುಮೆಯ ಧಾರೆ. ಅವರಆಸ್ವಾಧನೆಯ ಪರಿನಿಜಕ್ಕೂ ಮೆಚ್ಚುವಂಥದ್ದು. "ಏನ್ ನಾಟಕ ಆಡ್ತೀಯಾ? ಹೇಗಿದೆ ಮೈಗೆ?" ಎಂದು ಬೈಯುವುದು ಸುಲಭ. ನಾಟಕ ಆಡಲು ಅದೆಷ್ಟು ತಯಾರಿ ಬೇಕು ಎಂದು ಬಲ್ಲವರೇ ಬಲ್ಲರು. ಇದು ಪಕ್ಕ ಹಳ್ಳಿಗರ ಪಕ್ಕಾ ಕಲಾಪ್ರೀತಿಯ ನಾಟಕ.

## ಆಕರ ಗ್ರಂಥಗಳು


1. ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2011
2. ನಾಯಕ್ ಎನ್.ಆರ್., ಕನ್ನಡ ಬಯಲಾಟ ಪರಂಪರೆ, ಜಾನಪದ ಅಕಾಡೆಮಿ, ಬೆಂಗಳುರು, 1982
3. ರಂಗನಾಥ ಎಚ್.ಕೆ., ಕರ್ನಾಟಕ ರಂಗಭೂಮಿ, ಹೇಮಂತ ಸಾಹಿತ್ಯ, 2014
4. ಲಕ್ಷ್ಮಣ ಕೌಂಟೆ, ಕರ್ನಾಟಕ ವೃತ್ತಿರಂಗಭೂಮಿ, ಭುವನೇಶ್ವರಿ ಪ್ರಕಾಶನ, ಬೀದರ, 2015
5. ವೆಂಕಟರಾಮ್ ಎಸ್.ಎಸ್., ರಂಗಭೂಮಿ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, 2012
6. ಶಂಕರ ಕೆ. ರಂಗಭೂಮಿ, ಕಾವ್ಯಾಲಯ ಪ್ರಕಾಶನ ಮೈಸೂರು, 1955